Amount spent on Sri V. Venkatappa's Committee.

Q.—56. Sri T. HANUMIAH (Hiriyur—Scheduled Castes).—

Will the Government be pleased to state :—

the amount spent on Sri V. Venkatappa's Committee constituted to report on the integration and co-ordination of local bodies ?

A.—Sri T. CHANNIAH (Minister for Public Health and Local Self-Government).—

Rupees nine thousand only.

ಶ್ರೀ ಟಿ. ಹನುಮಯ್ಯ.—ಡಿಸ್ಟ್ರಿಕ್ಟ್ ಬೋರ್ಡ್‌ಗೆ ಚುನಾವಣೆ ಆಗುವುದನ್ನು ಬದಲಾಯಿಸಬೇಕು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

*ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಯಿಂದ ಅದು ಉದ್ಭವಿಸುವುದಿಲ್ಲ.

ಶ್ರೀ ಟಿ. ಹನುಮಯ್ಯ.—ವೆಂಕಟಪ್ಪನವರ ವರದಿ ಪ್ರಕಾರ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಈಗ ಆಕ್ಟ್ ಜಾರಿಯಲ್ಲಿರ ತಕ್ಕದ್ದೂ ಮತ್ತು ಕೆಲಸ ಕಾರ್ಯ ನಡೆಯುತ್ತಾಯಿರುವುದೂ ಅದರ ಮೇಲೆಯೇ.

ಶ್ರೀ ಟಿ. ಹನುಮಯ್ಯ.—ಅದರ ಮೇಲೆ ಬದಲಾವಣೆ ಮಾಡುವುದಕ್ಕೆ ಸರ್ಕಾರದವರಿಗೆ ಏನಾದರೂ ಅಭಿಲಾಷೆ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಯಿಂದ ಅದು ಉದ್ಭವಿಸುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಈಗಿರತಕ್ಕ ಆಕ್ಟ್ ಬದಲಾವಣೆ ಮಾಡಲಕ್ಕೆ ಏನಾದರೂ ಸರ್ಕಾರದವರು ಆಲೋಚನೆ ಮಾಡುತ್ತಾ ಇದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ನಿನ್ನೆ ದಿವಸವೇ ಮಾನ್ಯ ಸದಸ್ಯರಿಗೆ ತಿಳಿಸಿದ್ದೆ. ಬದಲಾವಣೆ ಮಾಡಬೇಕೆಂಬುದಾಗಿ ಉದ್ದೇಶವಿದೆ.

ಶ್ರೀ ಟಿ. ಹನುಮಯ್ಯ.—ತಾಲ್ಲೂಕು ಬೋರ್ಡ್ ಮಾಡಬೇಕೇ ಬೇಡವೇ ಎಂಬುದಕ್ಕೆ ಭಿನ್ನಾಭಿಪ್ರಾಯ ಬಂದದ್ದರಿಂದ ಒಂದು ಸಮಿತಿ ಮಾಡಿದ್ದೀರಿ ತಾನೆ ?

Mr. SPEAKER.—There is a Bill, the District Boards Bill coming up. You can discuss it then. Any other question ?

ಶ್ರೀ ಟಿ. ಹನುಮಯ್ಯ.—ಹಾಗಾದರೆ ಈ ತಾಲ್ಲೂಕು ಬೋರ್ಡ್ ಕಮಿಟಿ ಮಾಡಿದ್ದೀರಿ. ಇದರಲ್ಲ ಏನಾದರೂ ಭಿನ್ನಾಭಿಪ್ರಾಯ ಬಂದರೆ ಮುಂದೆ ಪಂಚಾಯಿತಿ ಬೋರ್ಡ್ ಮಾಡಲಕ್ಕೆ ಸರ್ಕಾರದವರು ಯೋಚನೆ ಮಾಡಿದ್ದೀರೇನು ?

(ಉತ್ತರವಿಲ್ಲ.)

ಶ್ರೀ ಜೆ. ಮಹಮ್ಮದ್ ಇಮಾಂ.—ವೆಂಕಟಪ್ಪನವರ ಕಮಿಟಿ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡಿ ಆಕ್ಟ್ ತರಲಿಕ್ಕೆ ಎಷ್ಟು ದುಡ್ಡು ಖರ್ಚಾಯಿತು ಹೇಳಬಲ್ಲಿರಾ ?

Mr. SPEAKER.—That is given in the answer.

ಶ್ರೀ ಜೆ. ಮಹಮ್ಮದ್ ಇಮಾಂ.—ಕಮಿಟಿ ರಿಪೋರ್ಟ್ ಇಂಪ್ಲಿಮೆಂಟ್ ಮಾಡಿ ಆಕ್ಟ್ ಜಾರಿ ಮಾಡಿದರಲ್ಲಾ ಅದಕ್ಕೆಲ್ಲಾ ಎಷ್ಟು ಖರ್ಚಾಗಿದೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

Fixing lowest selling rate for Agricultural Produce.

Q.—359. Sri A. V. NARASIMHA REDDY (Bangalore South).—

Will the Government be pleased to state :—

(*a*) whether they have fixed the lowest selling rate over any agricultural produce like ragi, paddy and millets ;

(*b*) the facts that were taken into consideration in fixing such rates ?

A.—Sri H. SIDDAVEERAPPA (Minister for Home and Industries).—

(*a*) and (*b*) It is not clear whether the question relates to the procurement prices or the retail selling prices of foodgrains and it is not therefore possible to furnish the answer.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸರ್ಕಾರದವರು ರೈತರಿಂದ ಧಾನ್ಯ ಕೊಂಡುಕೊಳ್ಳತಕ್ಕ ಬೆಲೆ ಗುಗದಿ ಮಾಡಿದ್ದೀರಾ ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು ಬತ್ತಕ್ಕೆ ಮಟ್ಟಿಗೆ ಮಾಡಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಬೆಲೆ ಎಷ್ಟು ಎಂಬುದನ್ನು ಹೇಳಬಲ್ಲರಾ ?

ಅಧ್ಯಕ್ಷರು.—20 ರೂಪಾಯಿ, 22 ರೂಪಾಯಿ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಬೆಲೆಯನ್ನು ಯಾವ ಆಧಾರದ ಮೇಲೆ ಗೊತ್ತುಮಾಡಲಾಯಿತು, ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಡೆಪ್ಯುಟಿ ಕಮೀಷನರ ಒಂದು ಸಭೆಯನ್ನು ಮೈಸೂರಿನಲ್ಲಿ ಕರೆದಿತ್ತು. ಸಾಮಾನ್ಯವಾಗಿ ಇದುವರೆಗೆ ಏನು ಬೀಳುತ್ತದೆ, ಯಾವ ರೀತಿಯಾಗಿ ಕೊಟ್ಟರೆ ಸರಿಯಾಗಬಹುದು ಎಂಬುದನ್ನು ನೋಡಿಕೊಂಡು ಏರು ಹೇರು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ಮಾಡಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಬೆಲೆಯನ್ನು ಗೊತ್ತುಮಾಡಬೇಕಾದರೆ ರೈತರಿಗೆ ಅದು ಸರಿಹೊಂದುತ್ತದೆ ಎಂಬುದನ್ನು ತಿಳಿದುಕೊಂಡು ಮಾಡುತ್ತಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ನಂಸ್ಥಾನದಲ್ಲಿ ರಾಗಿ ಮತ್ತು ಮಿಕ್ಕ ಮಿಲೆಟ್ಸ್ ಇವುಗಳ ಬೆಲೆಯನ್ನು ಗೊತ್ತುಮಾಡುವ ವಿಚಾರ ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳ cost of production ಎಷ್ಟಾಗುತ್ತದೆ ಎಂಬುದನ್ನು ಕಂಡುಹಿಡಿಯಬೇಕೆಂಬುದು ಸರ್ಕಾರದ ಗಮನದಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಹೇಗೆ ಬತ್ತಕ್ಕೆ ಬೆಲೆ ಗೊತ್ತುಮಾಡಿದ್ದೀರೋ ಹಾಗೆಯೇ, ಈಗಿನ ಮಾರ್ಕೆಟ್ ವ್ಯಾಲ್ಯು ತಿಳಿದುಕೊಂಡು, ಅವುಗಳಿಗೂ ಬೆಲೆ ಕೂಡಲೇ ನಿಗದಿ ಮಾಡುವುದಕ್ಕಾಗುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಆರೀತಿ ಮಾಡದೇ ಇರುವುದರಿಂದ ಈಗ ರೈತರಿಗೇನೂ ಅನಾನುಕೂಲವಾಗಿಲ್ಲ. ಪ್ರತಿವಾರ ನಾನು ರಿಜೇಲ್ ಸೆಲ್ಲಿಂಗ್ ಪ್ರೈಸ್ ನೋಡುತ್ತಾ ಇರುವುದರಲ್ಲಿ ಹೆಚ್ಚು ಉಬ್ಬರ ವಿಳಿತ ಕಂಡುಬರುತ್ತಾ ಇಲ್ಲ. ಅಂಥ ಸಮಯ ಬಂದಲ್ಲಿ ಆಲೋಚನೆ ಮಾಡುತ್ತೇವೆ.

Fixing a rate of Rs. 25 per palla in respect of Ragi.

Q.—597. Sri S. SIDDAPPA (Magadi).—

Will the Government be pleased to state :—

whether they propose to enact legislation fixing a rate of Rs. 25 per palla in respect of ragi also and order the purchase of the same by the Government?

A.—Sri H. SIDDAVEERAPPA (Minister for Home and Industries).—

No.

ಶ್ರೀ ಎಸ್. ಸಿದ್ದಪ್ಪ.—ಬತ್ತಕ್ಕೆ ನಿಗದಿ ಮಾಡಿರುವ ಹಾಗೆ ರಾಗಿ ಮತ್ತು ಜೋಳಕ್ಕೂ ಧಾರಣೆ ಏಕೆ ಗೊತ್ತು ಮಾಡಲಿಲ್ಲ, ಸ್ವಾಮಿ?

*ಶ್ರೀ ಎಚ್. ಸಿದ್ದವೀರಪ್ಪ.—ಆ ಪರಿಸ್ಥಿತಿ ಇನ್ನೂ ಉದ್ಭವಿಸಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಬತ್ತಕ್ಕೆ ಯಾವ ರೀತಿ ಉದ್ಭವಿಸಿತ್ತು?

ಶ್ರೀ ಎಚ್. ಸಿದ್ದವೀರಪ್ಪ.—ಬತ್ತ ಇನ್ನೂ ಕಟಾವು ಆಗುವುದಕ್ಕಿಂತ ಮುಂಚೆಯೇ 14-15 ರೂಪಾಯಿಗಳಂತೆ ತೆಗೆದುಕೊಳ್ಳುತ್ತಾ ಇದ್ದಾರೆ, ಸರ್ಕಾರದವರು ಏನು ಮಾಡುತ್ತಾರೆ ಎಂಬುದನ್ನು ತಿಳಿಯದೆ ರೈತರು ಅಗ್ಗವಾಗಿ ಮಾರಾಟ ಮಾಡುತ್ತಾ ಇದ್ದಾರೆ ಎಂದು ಕಂಡುಬಂತು, ಆದ್ದರಿಂದ ಸರ್ಕಾರದವರು ಈ ರೀತಿ ಮಾಡಿದರು. ಲಕ್ಷಾಂತರಗಟ್ಟಲೆ ರೂಪಾಯಿ ರೈತರಿಗೆ ಉಳಿಸಬೇಕೆಂಬ ದೃಷ್ಟಿಯಿಂದ ಈ ಮುಂಜಾಗರೂಕತೆಯ ಕಾರ್ಯಕ್ರಮ ಕೈಕೊಳ್ಳಲಾಯಿತು.

ಶ್ರೀ ಎಸ್. ಸಿದ್ದಪ್ಪ.—ಆ ತತ್ವವನ್ನು ರಾಗಿ ಮತ್ತು ಜೋಳಕ್ಕೂ ಅನ್ವಯ ಮಾಡಬೇಕಾದದ್ದು ಅಗತ್ಯವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮಲ್ಲಿ ನಿನ್ನೆ ಆಗಲೇ ಅರಿಕೆ ಮಾಡಿಕೊಂಡೆ. ಪ್ಲಾನಿಂಗ್ ಕಮೀಷನರವರು ಸಹ ಅವರ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. Steep fall in rates ಸರ್ಕಾರದವರ ಗಮನಕ್ಕೆ ಬಂದರೆ ಆಗ ಅದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ನಾವು ನೋಡುತ್ತಾ ಇರುವಂತೆ 3-3½ ಸೇರು ಇರತಕ್ಕದ್ದು ರೈತನಿಗೆ ಅಷ್ಟೇನೂ ಕಡಮೆ ಅಲ್ಲ ಎಂಬುದು ಸರ್ಕಾರದ ಅಭಿಪ್ರಾಯವಾಗಿರುವುದರಿಂದ ಈಗ ಆ ಪ್ರಶ್ನೆಯನ್ನು ಯೋಚನೆ ಮಾಡುತ್ತಾ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಕಾಲವರಿತು ಬೆಲೆ ನಿಗದಿ ಮಾಡುವುದಕ್ಕೆ ಸರ್ಕಾರದ ಭರವಸೆ ಇದೆಯೇ?

(ಉತ್ತರವಿಲ್ಲ.)

Mr. SPEAKER.—This question is similar to the previous question.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಒಂದು ತಿಂಗಳ ಹಿಂದೆ ರಾಗಿ 38 ರೂಪಾಯಿ ಇದ್ದದ್ದು ಈಗ 28 ರೂಪಾಯಾಗಿದೆ ಎಂಬುದು ಗೊತ್ತೆ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಟ್ರಾನ್‌ಸಿಷನಲ್ ಪೀರಿಯಡ್. ಅದೇ ನಿಗದಿಯಾದ ಬೆಲೆ ಎಂದು ಹೇಳುವುದಕ್ಕಾಗುವುದಿಲ್ಲ. Steady prices ಬಂದಿಲ್ಲ.

Sri H. K. SHIVARUDRAPPA.—Do you admit that there is a steep fall in respect of ragi?

Sri H. SIDDAVEERAPPA.—I am not in a position to say either yes or no.

ಶ್ರೀ ಎ. ಭೀಮಪ್ಪನಾಯಕ್.—ಬತ್ತದ ಕಾಸ್ಟ್ ಆಫ್ ಪ್ರೊಡಕ್ಷನ್ ಕಂಡುಹಿಡಿಯಲಾಯಿತೆ?

ಶ್ರೀ ಎಚ್. ಸಿದ್ದವೀರಪ್ಪ.—ಸಾಮಾನ್ಯವಾಗಿ rough estimate ಮಾಡಿ ನೋಡಿದೆ.

ಶ್ರೀ ಎ. ಭೀಮಪ್ಪನಾಯಕ್.—ಅಂಥ rough estimate ಮಾಡುವುದಕ್ಕೆ ಸಾಧ್ಯವಿರಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಸಾಧ್ಯವಿದೆ.

ಶ್ರೀ ಎ. ಭೀಮಪ್ಪನಾಯಕ್.—ಬತ್ತಕ್ಕೆ ಬೆಲೆ ನಿಗದಿ ಮಾಡಿದ್ದರೂ 15 ರೂಪಾಯಿಗಳಿಗೆ ಮಾರಿರುವ ಉದಾಹರಣೆಗಳಿವೆಯೇ?

Sri H. SIDDAVEERAPPA.—I have got sufficient data with me.

Sri A. BHEEMAPPA NAIK.—Can I know half a dozen names of persons who have sold at Rs. 15?

Sri H. SIDDAVEERAPPA.—I have got my report and I do not think it is necessary to disclose that report. It is a report I have received from the Deputy Commissioner.

Mr. SPEAKER.—The Minister treats it as confidential.

Sri A. BHEEMAPPA NAIK.—Let him say it. Is it not on account of pressure brought upon you by some big landlords that you fixed this paddy rate and did not think of the poor agriculturists who are growing small quantities of ragi and jowar?